ಸ್ಥಾಪನೆ: 1973

ದೂರವಾಣಿ : 26506213, 26606365
ಇ–ಮೇಲ್ : **ho@ashoknagarbank.com**
ಜಾಲತಾಣ : http://www.ashoknagarbank.com

# ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತ

ನಂ. 1380/ಬಿ, 6ನೇ ಅಡ್ಡರಸ್ತೆ, ಅಶೋಕನಗರ, ಬನಶಂಕರಿ 1ನೇ ಹಂತ,
2ನೇ ಬ್ಲಾಕ್, ಬೆಂಗಳೂರು – 560 050.

## 2020–21ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆ

## ಸೂಚನಾ ಪತ್ರ

**ಸನ್ಮಾನ್ಯ ಸದಸ್ಯರೇ**

ಬ್ಯಾಂಕಿನ 2020–21ನೇ ಸಾಲಿನ 48ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ ಕೋವಿಡ್–19 ಸಾಂಕ್ರಾಮಿಕರೋಗದ ಹಿನ್ನೆಲೆಯಲ್ಲಿ ವರ್ಚುಯಲ್ ಮೀಟಿಂಗ್ ಮುಖಾಂತರ ಸರ್ವಸದಸ್ಯರ ಸಭೆಯನ್ನು ದಿನಾಂಕ 5ನೇ ಡಿಸೆಂಬರ್ 2021 ನೇ ಭಾನುವಾರ ಬೆಳಿಗ್ಗೆ 10.00 **ಗಂಟೆಗೆ** ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಕೆ. ಎಮ್. ನಾಗರಾಜ್‌ರವರ** ಘನ ಅಧ್ಯಕ್ಷತೆಯಲ್ಲಿ ಈ ಕೆಳಗಿನ ವಿಷಯಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುವ ಸಲುವಾಗಿ ಸಭೆಯನ್ನು ಕರೆಯಲಾಗಿದೆ.

### –:( ವಿಷಯಗಳು ):–

1. ಪ್ರಾರ್ಥನೆ
2. ಸ್ವಾಗತ ಭಾಷಣ
3. ನಿಧನ ಹೊಂದಿದ ಸದಸ್ಯರುಗಳಿಗೆ ಗೌರವಾರ್ಥವಾಗಿ ಸಂತಾಪ ಸೂಚನೆ.
4. ಸರ್ವಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ದಾಖಲು ಮಾಡುವುದು.
5. 2019–20 ನೇ ಸಾಲಿನ 47ನೇ ವಾರ್ಷಿಕ ಸರ್ವಸದಸ್ಯರ ವರ್ಚುಯಲ್ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸುವುದು.
6. 2020–21ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯ ಪರಿಶೀಲನೆ ಮತ್ತು ಅಂಗೀಕಾರ.
7. 2021–22ನೇ ಸಾಲಿನ ಕಾರ್ಯಯೋಜನೆಗೆ ಅನುಮೋದನೆ.

8. 2020–21 ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರಗಳ ತಃಖ್ತೆ ಲೆಕ್ಕಪರಿಶೋಧನಾ ವರದಿ ಮತ್ತು ಮಂಡಳಿಯ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.

9. 2020–21 ನೇ ಸಾಲಿನ ಅಂದಾಜು ಆಯ–ವ್ಯಯಕ್ಕಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು ಮತ್ತು 2021–22ನೇ ಸಾಲಿನ ಅಂದಾಜು ಆಯ–ವ್ಯಯವನ್ನು ಮಂಜೂರು ಮಾಡುವುದು.

10. 2020–21ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.

11. ಬ್ಯಾಂಕಿನ ಬೈಲಾ ತಿದ್ದುಪಡಿ ಅನುಮೋದನೆ,

12. 2021–22ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು

13 ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಯಾವುದೇ ರೀತಿಯ ಸಾಲ ಪಡೆದಿದ್ದಲ್ಲಿ ಅವುಗಳ ಪರಿಶೀಲನೆ.

14 ಬ್ಯಾಂಕಿನ ಸದಸ್ಯತ್ವಕ್ಕೆ ಸೇರ್ಪಡೆ ಮತ್ತು ತೆಗೆದು ಹಾಕಿದ ಸದಸ್ಯರ ಕುರಿತು ಟಿಪ್ಪಣಿ.

15 ನಿಧಿಗಳ ವಾಸ್ತವಿಕ ಬಳಕೆಗಳ ಬಗ್ಗೆ ವಿಮರ್ಶೆ.

16. ಸರ್ವ ಸದಸ್ಯರ ಸಭೆಯ ನಿರ್ಣಯಗಳನ್ನು ಅಂಗೀಕರಿಸುವುದು.

17. ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳು.

ದಿನಾಂಕ : 15.11.2021
ಸ್ಥಳ : ಬೆಂಗಳೂರು – 560 050

**ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ**
**ಎಸ್. ಟಿ. ಮಂಗಳ**
**ಕಾರ್ಯದರ್ಶಿ**

**ಸನ್ಮಾನ್ಯ ಸದಸ್ಯರು ಸಭೆಯಲ್ಲಿ ಭಾಗವಹಿಸುವುದಕ್ಕೆ ವಿಶೇಷ ಸೂಚನೆ :**

ಬ್ಯಾಂಕಿನ 2020–21ನೇ ಸಾಲಿನ 48ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ ಕೋವಿಡ್–19 ಸಾಂಕ್ರಾಮಿಕರೋಗದ ಹಿನ್ನೆಲೆಯಲ್ಲಿ **"Video Conference/ Virtual Meeting"** ಮುಖಾಂತರ ಸಭೆಯನ್ನು ನಡೆಸಬೇಕಾಗಿದ್ದು, ಈ ಸಭೆಯಲ್ಲಿ ಭಾಗವಹಿಸಲು ಎಲ್ಲಾ ಸದಸ್ಯರಿಗೆ ಯು.ಆರ್.ಎಲ್. **(URL)** ಲಿಂಕ್‌ಅನ್ನು ಕಳುಹಿಸಲಾಗುವುದು. ಇದರಲ್ಲಿ ಸದಸ್ಯರು ತಮ್ಮ ಹೆಸರು ಮತ್ತು ಸದಸ್ಯತ್ವ ಸಂಖ್ಯೆಯನ್ನು ನಮೂದಿಸಿ, ಲಾಗಿನ್ ಆಗಿ ಸಭೆಯಲ್ಲಿ ಭಾಗವಹಿಸಬಹುದು. **ತಮಗೆ ಕಳುಹಿಸಿರುವ ನೋಟೀಸಿನಲ್ಲಿ ನಮೂದಿಸಿರುವ ವಿಳಾಸದಲ್ಲಿ ತಮ್ಮ ಹೆಸರಿನ ಮೇಲೆ ಸದಸ್ಯತ್ವ ಸಂಖ್ಯೆಯನ್ನು ನಮೂದಿಸಿದ್ದು ಕಡೆಯ ನಾಲ್ಕು (4) ಸಂಖ್ಯೆಗಳನ್ನು ಪಾಸ್‌ವರ್ಡ್ ಆಗಿ ನಮೂದಿಸಲು ಕೋರಿದೆ.** ಮಾಹಿತಿ ಬೇಕಾದಲ್ಲಿ ಬ್ಯಾಂಕಿನ ಅಧಿಕಾರಿಗಳನ್ನು ಮೊಬೈಲ್ ನಂಬರ್ : 9663655307 / 9591782080 ಸಂಪರ್ಕಿಸುವುದು.

## 48ನೇ ವಾರ್ಷಿಕ ಸರ್ವಸದಸ್ಯರ ಸಭೆಯ ವಿಷಯಗಳ ಮೇಲೆ ಸಂಕ್ಷಿಪ್ತ ಟಿಪ್ಪಣಿ

**ವಾರ್ಷಿಕ ವರದಿಯನ್ನು ದಿನಾಂಕ 22/11/2021 ರಿಂದ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಪಡೆಯಬೇಕಾಗಿ ವಿನಂತಿ:**

**ವಿಷಯ** 5: **2019-20ನೇ** ಸಾಲಿನ 47ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದ್ದು ಅನುಮೋದನೆಗೆ ಸಲ್ಲಿಸಲಾಗಿದೆ.

**ವಿಷಯ** 6: **2020-21ನೇ** ಸಾಲಿನ ಆಡಳಿತ ಮಂಡಳಿಯ ವರದಿಯನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದೆ ಮತ್ತು ಸರ್ವಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ.

**ವಿಷಯ** 7 : **2021-22ನೇ ಸಾಲಿನ ಕಾರ್ಯಯೋಜನೆ ಈ ಕೆಳಕಂಡಂತಿದೆ.**

(1) ನಿವ್ವಳ ನಿಷ್ಕ್ರಿಯ ಆಸ್ತಿಯ ಪ್ರಮಾಣವನ್ನು ಶೇಕಡ 4% ಕ್ಕಿಂತ ಕಡಿಮೆ ಮಾಡುವುದು.

(2) ಬ್ಯಾಂಕಿನ ಒಟ್ಟು ವ್ಯವಹಾರಗಳನ್ನು 250 ಕೋಟಿಗಳಿಗೆ ಹೆಚ್ಚಿಸುವುದು.

(3) ಬ್ಯಾಂಕಿನ ಗ್ರಾಹಕರುಗಳಿಗೆ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುವುದು.
(4) ನಗದು ರಹಿತ ವ್ಯವಹಾರವನ್ನು ಉತ್ತೇಜಿಸಲು ರುಪೇ ಕಾರ್ಡ್ ಬಳಕೆಗೆ ಹೆಚ್ಚು ಉತ್ತೇಜನ ನೀಡುವುದು.

**ವಿಷಯ** 8: 2020-21ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳನ್ನು ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದ್ದು ತಮ್ಮ ಅನುಮೋದನೆಗೆ ಸಲ್ಲಿಸಲಾಗಿದೆ.

**ವಿಷಯ** 9(1). **ಗಣಕೀಕರಣಕ್ಕೆ: 2020-21** ನೇ ಸಾಲಿನಲ್ಲಿ ಗಣಕೀಕರಣಕ್ಕೆ ರೂ 1,90,377/- ಹೆಚ್ಚುವರಿ ಖರ್ಚಾಗಿದ್ದು ಮತ್ತು ಅದಕ್ಕೆ ಕಾರಣ ATM SWITCH, ರುಪೇ ಡೆಬಿಟ್ ಕಾರ್ಡ್‌ಗಳನ್ನು ಬ್ಯಾಂಕಿಗೆ ಪರಿಚಯಿಸುವಾಗ, ATM SWITCH ಗೆ ಮತ್ತು ಕಾರ್ಡ್‌ಗಳಿಗೆ ತಗಲಿದ ವೆಚ್ಚ ಸ್ವಲ್ಪ ಮಟ್ಟಿಗೆ ಹೆಚ್ಚಾಗಿದ್ದರ ಹಿನ್ನೆಲೆಯಲ್ಲಿ ಗಣಕೀಕರಣದ ಖರ್ಚು ಹೆಚ್ಚಾಗಿದೆ.

**9 (2) ಸರ್ವಸದಸ್ಯರ ಸಭೆ ಖರ್ಚು: 2020-21** ನೇ ಸಾಲಿನಲ್ಲಿ ಸರ್ವ ಸದಸ್ಯರ ಸಭೆ ಖರ್ಚು ರೂ 2,166/- ಹೆಚ್ಚುವರಿ ಖರ್ಚಾಗಿದ್ದು, 2019-20ನೇ ಸಾಲಿನ ಸಭೆಯನ್ನು ಕೋವಿಡ್-19 ರ ಹಿನ್ನೆಲೆಯಲ್ಲಿ ವರ್ಚುಯಲ್ ಮೀಟಿಂಗ್ ಮಾಡಿದ್ದರ ಹಿನ್ನೆಲೆಯಲ್ಲಿ ಸರ್ವ ಸದಸ್ಯರ ಸಭೆಗೆ ಕೇವಲ ರೂ 2 ಲಕ್ಷ ಮಾತ್ರ ಆಯವ್ಯಯದಲ್ಲಿ ಮಂಜೂರಾತಿ ಪಡೆದಿದ್ದು 2 ಬಾರಿ ಪತ್ರಿಕಾ ಪ್ರಕಟಣೆಯನ್ನು ನೀಡಿದ್ದರ ಪ್ರಯುಕ್ತ ಸ್ವಲ್ಪ ಮಟ್ಟಿಗೆ ವೆಚ್ಚ ಹೆಚ್ಚಾಗಿದೆ.

9 (3) **ಪೀಠೋಪಕರಣ:** ಬ್ಯಾಂಕಿಗೆ ಅಡಮಾನ ಮಾಡಿದ ಕಡತಗಳನ್ನು ಸುರಕ್ಷಿತವಾಗಿ ಸಂರಕ್ಷಿಸಿ ಇಡಲು Fire Proof ಫೈಲಿಂಗ್ ಕ್ಯಾಬಿನೆಟ್‌ಗಳನ್ನು ಖರೀದಿಸಿದ್ದರ ಹಿನ್ನೆಲೆಯಲ್ಲಿ ಪೀಠೋಪಕರಣಗಳ ಖರ್ಚು ಹೆಚ್ಚಾಗಿದೆ.

**9 (4) ಸೆಕ್ಯೂರಿಟಿ ಸರ್ವೀಸಸ್ : 2020-21** ನೇ ಸಾಲಿನಲ್ಲಿ ಸೆಕ್ಯೂರಿಟಿ ಸರ್ವೀಸಸ್ ಖರ್ಚು ರೂ 83,131/- ಹೆಚ್ಚುವರಿ ಖರ್ಚಾಗಿದ್ದು ಅದಕ್ಕೆ ಕಾರಣ ಬ್ಯಾಂಕಿಗೆ ಅಡಮಾನ ಮಾಡಿದ ಎರಡು ಸ್ಥಿರಾಸ್ತಿಯನ್ನು ಬ್ಯಾಂಕು ಸ್ವಾಧೀನ ಪಡಿಸಿಕೊಂಡಿದ್ದು ಎರಡು ಸ್ವತ್ತುಗಳು ಕೋವಿಡ್-19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಮಾರಾಟವಾಗದೇ ಇದ್ದ ಪ್ರಯುಕ್ತ ಸೆಕ್ಯೂರಿಟಿ ಗಾರ್ಡ್‌ಗಳನ್ನು ನೇಮಿಸಿದ್ದರಿಂದ ಸೆಕ್ಯೂರಿಟಿ ಸರ್ವೀಸ್ ಖರ್ಚಿನಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಾಗಿದೆ.

**ವಿಷಯ 10** : ಬ್ಯಾಂಕು ಕಳೆದ ವರ್ಷಕ್ಕಿಂತ ರೂ. 18.55 ಲಕ್ಷಗಳಷ್ಟು ಕಡಿಮೆ ಲಾಭಗಳಿಸಿದ್ದು ಕೋವಿಡ್–19 ರ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಬ್ಯಾಂಕಿನ ನಿವ್ವಳ ಎನ್.ಪಿ.ಎ. ಕಡಿಮೆ ಮಾಡಲು ರೂ 383.43 ಲಕ್ಷಗಳನ್ನು ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿಗೆ ಮತ್ತು ಆದಾಯ ತೆರಿಗೆಯನ್ನು ಕಡಿಮೆಗೊಳಿಸುವ ಹಿನ್ನೆಲೆಯಲ್ಲಿ 18.40 ಲಕ್ಷಗಳನ್ನು ವಿಶೇಷ ನಿಧಿಗೆ ಅವಕಾಶವನ್ನು ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ನೀತಿಯಂತೆ ಕೋವಿಡ್–19ರ ಹಿನ್ನಲೆಯಲ್ಲಿ ಮೊರಾಟೋರಿಯಮ್ ನೀಡಿದ ಸಾಲದ ಖಾತೆಗಳಿಗೆ ಶೇಕಡ 10 ರಂತೆ ಅಂದರೆ 32.15 ಲಕ್ಷ ಲಾಭದಲ್ಲಿ ತೆಗೆದಿರಿಸಿದರ ಪ್ರಯುಕ್ತ ನಿವ್ವಳ ಲಾಭ ಕಡಿಮೆಯಾಗಿದೆ.

**ವಿಷಯ ಸಂಖ್ಯೆ. 11**:ಬೈಲಾ ತಿದ್ದುಪಡಿ : ಕರ್ನಾಟಕ ಸಹಕಾರಕಾಯ್ದೆ ತಿದ್ದುಪಡಿ ಸೆಪ್ಟೆಂಬರ್–2021ರ ಹಿನ್ನಲೆಯಲ್ಲಿ ಅವಶ್ಯಕವಾಗಿ ತಿದ್ದುಪಡಿ ಮಾಡಲೇಬೇಕಾದ ಉಪವಿಧಿಗಳನ್ನು ಪುಟ ಸಂಖ್ಯೆ **9** ರಿಂದ **11** ರವರೆಗೆ ಮುದ್ರಿಸಲಾಗಿದೆ. ಸಾಮಾನ್ಯ ಸಭೆಯಲ್ಲಿ ಅನುಮೋದನೆಗೆ ಸಲ್ಲಿಸಿದೆ.

**ವಿಷಯ12 :** ಇತ್ತೀಚೆಗಷ್ಟೇ ಭಾರತೀಯ ರಿಸರ್ವ್ ಬ್ಯಾಂಕು ಹೊರಡಿಸಿರುವ ಸುತ್ತೋಲೆಯಂತೆ 2021–22 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ನಡೆಸಲು ಮೆ॥ ಮುರಳಿ ಮತ್ತು ವೆಂಕಟ್ ಮತ್ತು **ಮೆ**॥ ವಿಜಯ್‌ಪಾಂಚಪ್ಪ ಮತ್ತು ಕಂಪನಿ ಇವರುಗಳಿಂದ ಅರ್ಜಿಗಳು ಬಂದಿದ್ದು ಅವುಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿಗೆ ಕಳುಹಿಸಿದ್ದು ಅನುಮತಿ ದೊರೆತ ಕೂಡಲೇ 2021–22ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳಲು ಹಾಗು ಅವರಿಗೆ ಸಂಭಾವನೆಯನ್ನು ನೀಡುವ ಅಧಿಕಾರವನ್ನು ಆಡಳಿತ ಮಂಡಳಿಗೆ ನೀಡಲು ಮತ್ತು ಅನುಮೋದಿಸಲು ಸರ್ವಸದಸ್ಯರ ಸಭೆಗೆ ಮಂಡಿಸಲಾಗಿದೆ.

**ವಿಷಯ ಸಂಖ್ಯೆ. 13**: ನಿರ್ದೇಶಕರು ಮತ್ತು ಅವರ ಸಂಬಂಧಿಗಳಿಗೆ ಯಾವುದೇ ರೀತಿಯ ಸಾಲಗಳನ್ನು ನೀಡಿರುವುದಿಲ್ಲ.

**ವಿಷಯ ಸಂಖ್ಯೆ. 14 :** ಪ್ರಸಕ್ತ ಸಾಲಿನಲ್ಲಿ 85 ನಿಯತ ಸದಸ್ಯರನ್ನು 50 ಸಹ ಸದಸ್ಯರನ್ನು ಸೇರಿಸಿಕೊಳ್ಳಲಾಗಿದೆ 22 ನಿಯತ ಹಾಗೂ 4 ಸಹಸದಸ್ಯರ ಸದಸ್ಯತ್ವ ವಾಪಸ್ಸು ಮಾಡಲಾಗಿದೆ. ವಿವರಗಳನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದೆ ಹಾಗೂ ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಸಲ್ಲಿಸಲಾಗಿದೆ.

**ವಿಷಯಸಂಖ್ಯೆ. 15 :** ನಿಧಿಗಳ ವಾಸ್ತವಿಕ ಬಳಕೆ ಈ ಕೆಳಕಂಡಂತಿದೆ.

**(1) ಸಾಮಾನ್ಯ ನಿಧಿ** : ರೂ. 35,700/– ಗಳನ್ನು ವಿವಿಧ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ಸದಸ್ಯರ ಮಕ್ಕಳಿಗೆ ದಿನಾಂಕ 08/09/2020 ರಂದು ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಖರ್ಚು ಮಾಡಲಾಗಿದೆ.

(2) **ಮರಣ ಪರಿಹಾರ ನಿಧಿ**ಯಿಂದ 7 ಜನರಿಗೆ ಒಟ್ಟು ರೂ. 35,000/–ಗಳನ್ನು ನೀಡಲಾಗಿದೆ.

(3) **ಸದಸ್ಯರ ಯೋಗಕ್ಷೇಮ ನಿಧಿ**ಯಿಂದ 3 ಜನ ಸದಸ್ಯರಿಗೆ ರೂ.45,000/– ಗಳನ್ನು ಅವರ ವೈದ್ಯಕೀಯ ಚಿಕಿತ್ಸೆಗಾಗಿ ಸದಸ್ಯರಿಗೆ ನೀಡಲಾಗಿದೆ.

## ಮಾನ್ಯ ಸದಸ್ಯರಲ್ಲಿ ಮನವಿ

1. ಮಹಾಸಭೆ ಸೂಚನಾ ಪತ್ರಿಕೆಯನ್ನು ಬ್ಯಾಂಕಿನ ಸೂಚನಾ ಫಲಕದಲ್ಲೂ, ಬ್ಯಾಂಕಿನ ವೆಬ್–ಸೈಟ್ ನಲ್ಲೂ ಹಾಗೂ ಒಂದು ಜನಪ್ರಿಯ ಕನ್ನಡ ದಿನಪತ್ರಿಕೆಯಲ್ಲೂ ಪ್ರಕಟಿಸಲಾಗುವುದು. ಅಲ್ಲದೇ ಪ್ರತಿಯೊಬ್ಬ ಸದಸ್ಯರ ನೊಂದಾಯಿತ ವಿಳಾಸಕ್ಕೆ ತೆರೆದ ಅಂಚೆಯ ಮೂಲಕ ಕಳುಹಿಸಲಾಗುವುದು. ವಿಶೇಷವಾಗಿ ಸರಳ ಮಾಹಿತಿ ಸಂದೇಶ (ಎಸ್.ಎಂ.ಎಸ್) ಮೂಲಕ ಸದಸ್ಯರ ಮೊಬೈಲ್‌ಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುವುದು. ಈವರೆಗೆ ಮೊಬೈಲ್ ಸಂಖ್ಯೆ ನೀಡಿದ ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಯನ್ನು ಕೂಡಲೇ ಬ್ಯಾಂಕಿನಲ್ಲಿ ನೋಂದಾಯಿಸಿಕೊಳ್ಳುವುದು.

2. ಬ್ಯಾಂಕಿನ ವಾರ್ಷಿಕ ವರದಿಯ ಪುಸ್ತಕವನ್ನು ಬ್ಯಾಂಕಿನ ವ್ಯವಹಾರದ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ ಮತ್ತು ಬ್ಯಾಂಕಿನ ಲೆಕ್ಕಪರಿಶೋಧನೆಯಾದ ಆರ್ಥಿಕ ತಃಖ್ತೆಗಳನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಸದಸ್ಯರು ಇದರ ಪ್ರಯೋಜನವನ್ನು ಪಡೆಯಲು ಕೋರಿದೆ.

3. ಬ್ಯಾಂಕಿನ ವಾರ್ಷಿಕ ಸಭೆಯಲ್ಲಿ ವಿಷಯ ಮಂಡಿಸಲು ಇಚ್ಛಿಸುವವರು ವಾರ್ಷಿಕ ಮಹಾಸಭೆಗೆ ಐದು ದಿನಗಳ ಮೊದಲು ಲಿಖಿತ ಪತ್ರದ ಮೂಲಕ ಕಾರ್ಯದರ್ಶಿಯವರಿಗೆ ತಿಳಿಸಬೇಕು ಅಥವಾ e-mail : ho@ashoknagarbank.com ಅಥವಾ ವಾಟ್ಸ್‌ಅಪ್ ನಂಬರ್ 9108510084 ಇದಕ್ಕೆ ಮಾಹಿತಿಗಳನ್ನು ಕಳುಹಿಸಲು ಕೋರಿದೆ.

4. ಡಿವಿಡೆಂಡ್ ಪಡೆಯದೆ ಇರುವ ಸದಸ್ಯರು ಡಿವಿಡೆಂಡನ್ನು ಬ್ಯಾಂಕಿಗೆ ಬಂದು ಪಡೆಯುವುದು. ಮೂರು ವರ್ಷಗಳವರೆಗೂ ಡಿವಿಡೆಂಡ್ ಪಡೆಯದೇ ಇದ್ದ ಪಕ್ಷದಲ್ಲಿ ಅದನ್ನು ಬ್ಯಾಂಕಿನ ಆಪದ್ಧನ ನಿಧಿಗೆ ವರ್ಗಾಯಿಸಲಾಗುವುದು.

5. ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯದೇ ಇರುವ ಸದಸ್ಯರುಗಳು ಕೂಡಲೇ ಉಳಿತಾಯ ಖಾತೆಯನ್ನು ತೆರೆದು ಡಿವಿಡೆಂಡ್ ಮೊಬಲಗನ್ನು ಅವರುಗಳ ಖಾತೆಗೆ ವರ್ಗಾಯಿಸಿಕೊಳ್ಳುವುದು ಮತ್ತು ಈಗಾಗಲೇ ಉಳಿತಾಯ ಅಥವಾ ಚಾಲ್ತಿ ಖಾತೆ ಹೊಂದಿರುವ ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆಯನ್ನು ಬ್ಯಾಂಕಿಗೆ ನೀಡಿ ಎಸ್.ಎಂ.ಎಸ್ ಅಲರ್ಟ್‌ಗಳನ್ನು ಪಡೆಯಬಹುದು.

6. ಬ್ಯಾಂಕಿನಲ್ಲಿ ಮರಣೋತ್ತರ ಪರಿಹಾರ ನಿಧಿಯನ್ನು ಸ್ಥಾಪಿಸಲಾಗಿದೆ. ಸದಸ್ಯರು ರೂ 300/– ಪಾವತಿಸಿ ಸದಸ್ಯರಾಗಬೇಕು. ಮರಣೋತ್ತರ ಪರಿಹಾರ ನಿಧಿಯಾಗಿ ರೂ 5000/– ವನ್ನು ಅವರ ಅಧಿಕೃತ ವಾರಸುದಾರರಿಗೆ ನೀಡಲಾಗುವುದು.

7. 2020–21 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ/ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇ.85% ಕ್ಕೂ ಹೆಚ್ಚಿನ ಅಂಕಗಳಿಸಿದ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇ 75% ಕ್ಕೂ ಹೆಚ್ಚಿನ ಅಂಕಗಳನ್ನು ಪಡೆದ ಸದಸ್ಯರ ಮಕ್ಕಳಿಗೆ ಮತ್ತು ಸರ್ಕಾರಿ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಇದಕ್ಕೆ ಸಂಬಂಧಿಸಿದ ಅರ್ಜಿ ನಮೂನೆಯನ್ನು ಬ್ಯಾಂಕಿನ ವೇಳೆಯಲ್ಲಿ ಪಡೆದು ವಿವರಗಳನ್ನೊಳಗೊಂಡ ಅರ್ಜಿಗಳನ್ನು ವ್ಯವಸ್ಥಾಪಕರಿಗೆ ದಿನಾಂಕ 29–11–2021 ರೊಳಗೆ ಸಲ್ಲಿಸತಕ್ಕದ್ದು. ಅರ್ಹ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಗಳನ್ನು ದಿನಾಂಕ : 6–12–2021 ರಿಂದ 16–12–2021ರ ಒಳಗೆ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಖುದ್ದಾಗಿ ಪಡೆಯತಕ್ಕದ್ದು.

<u>**OUR VALUE ADDED SERVICES**</u>

- ❖ Facilities to the Customers equivalent to any of the Nationalized Banks.
- ❖ Savings Bank Account, Current Account, Recurring Deposits(RD) facilities.
- ❖ Lockers facilities are available.
- ❖ Demand Draft (DD), Bankers Cheque, Pay Orders, Money transfer through NEFT/RTGS facilities.
- ❖ POS (Point of Sale) Swiping Machines are provided to the Current Account holders.
- ❖ **Rupay Debit Card facility provided to the customers.**

| | **Deposit Rate of Interest** | |
|---|---|---|
| **Period** | **GENERAL** | **SENIOR** |
| 30 Days to 60 days | 4.50 | 4.50 |
| 61 Days to90 days | 5.00 | 5.00 |
| 91 Days to 180 days | 5.50 | 5.50 |
| 181 Days to 365 days | 6.50 | 6.75 |
| 1 Year to 2 Years | 7.00 | 7.50 |
| 2 Year to 3 Years | 7.50 | 8.00 |
| 3 Year to 5 Years | 7.00 | 7.50 |

❖ **Loans and Advances :**

- ➢ Gold Loan Up to Rs. 15 lakhs.
- ➢ Home Loan Up to Rs. 70 lakhs.
- ➢ Property Mortgage Loan Up to Rs. 2.00 crores.
- ➢ Over Draft Loan Up to Rs. 2.00 Crores.
- ➢ Business Purpose Loan (Group Exposure) Rs. 4.00 Crores.
- ➢ Vehicle Loans.
- ➢ Joint Surety Loans.
- ➢ Loans on LIC/Kisan Vikas Bonds up to 5 lakhs.

**Loans will be processed and disbursed at the shortest time based on the requirements of our Customers**

## ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತ

### ಕಳೆದ ಐದು (5) ವರ್ಷಗಳ ಪಕ್ಷಿ ನೋಟ

(₹ಗಳಲ್ಲಿ)

| ಕ್ರ. ಸಂ. | ವಿವರ | 31.3.2017 | 31.03.2018 | 31.03.2019 | 31.03.2020 | 31.03.2021 |
|---|---|---|---|---|---|---|
| 1. | ಸದಸ್ಯತ್ವ | 5417 | 5521 | 5623 | 5755 | 5864 |
| 2. | ಷೇರು ಬಂಡವಾಳ | 5,85,02,600 | 6,60,92,100 | 7,27,05,400 | 7,71,63,400 | 8,09,78,200 |
| 3. | ಆಪದ್ಧನ ನಿಧಿ ಮತ್ತು ಇತರೆ ನಿಧಿಗಳು | 10,12,78,270 | 11,85,22,743 | 13,70,99,647 | 16,63,25,839 | 22,56,17,134 |
| 4. | ಠೇವಣಿಗಳು | 87,56,11,470 | 92,34,48,399 | 1,04,20,43,503 | 1,07,73,47,363 | 1,15,86,85,000 |
| 5. | ಸಾಲಗಳು | 52,39,18,948 | 57,04,31,406 | 69,14,98,705 | 76,00,27,043 | 90,74,11,464 |
| 6. | ಹೂಡಿಕೆಗಳು | 45,94,47,100 | 47,43,86,482 | 51,55,32,581 | 51,63,14,810 | 49,56,53,653 |
| 7. | ದುಡಿಯುವ ಬಂಡವಾಳ | 1,07,18,46,062 | 1,22,06,06,342 | 1,29,00,39,100 | 1,35,26,08,090 | 1,49,54,97,000 |
| 8 | ನಿವ್ವಳ ಲಾಭ | 2,04,49,803 | 2,13,34,073 | 2,34,63,297 | 1,44,81,332 | 1,26,26,229 |
| 9 | ಡಿವಿಡೆಂಡ್ (ಶೇ.) | 14% | 14% | 14% | ಆರ್‌ಬಿಐ ನಿರ್ದೇಶನದಂತೆ ಡಿವಿಡೆಂಡ್ ವಿತರಿಸಿರುವುದಿಲ್ಲ | 10% (ಸೂಚಿಸಿದೆ) |
| 10 | ಆಡಿಟ್ ವರ್ಗೀಕರಣ | **'ಎ ಶ್ರೇಣಿ** | **ಎ ಶ್ರೇಣಿ** | **ಎ ಶ್ರೇಣಿ** | **ಎ ಶ್ರೇಣಿ** | **ಎ ಶ್ರೇಣಿ** |
| 11 | ಒಟ್ಟು ಎನ್.ಪಿ.ಎ. ಪ್ರಮಾಣ | 8.75% | 7.71% | 8.68% | 5.72% ನಿವ್ವಳ | **5.16% ನಿವ್ವಳ** |

## ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತ

**ನಂ. 1380/ಬಿ, 6ನೇ ಅಡ್ಡರಸ್ತೆ, ಅಶೋಕನಗರ, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು – 560 050**

**ಉಪನಿಯಮ ತಿದ್ದುಪಡಿ – 2021**

| ಬೈಲಾ ಸಂಖ್ಯೆ | ಹಾಲಿ ಬೈಲಾ | ತಿದ್ದುಪಡಿ ನಂತರದ ಬೈಲಾ | ತಿದ್ದುಪಡಿಗೆ ಕಾರಣಗಳು |
|---|---|---|---|
| 4 | **ಪದಗಳ ಅರ್ಥ ವಿವರಣೆ :**<br>(28) 'ಡೆಲಿಗೇಟ್' ಎಂದರೆ, ಇತರ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವ ಬ್ಯಾಂಕಿನ ಒಬ್ಬ ನಿರ್ದೇಶಕ. | **ಪದಗಳ ಅರ್ಥ ವಿವರಣೆ :**<br>(28) "ಡೆಲಿಗೇಟ್" ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತ ಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ ನಿರ್ದೇಶಕ." | ಕರ್ನಾಟಕ ಸಹಕಾರ ಕಾಯ್ದೆ ತಿದ್ದುಪಡಿ ಸೆಪ್ಟೆಂಬರ್ 2021 |
| 11 | **ಷೇರು ಹಣಕ್ಕಾಗಿ ಅರ್ಜಿ**<br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶ ಧನವನ್ನು ಪಾವತಿಸತಕ್ಕದ್ದು. ಅಂಥ ಷೇರು ಅರ್ಜಿಯನ್ನು ಮಂಡಳಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು. | **ಷೇರು ಹಣಕ್ಕಾಗಿ ಅರ್ಜಿ**<br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶ ಧನವನ್ನು ಪಾವತಿಸತಕ್ಕದ್ದು. ಅಂಥ ಷೇರು ಅರ್ಜಿಯನ್ನು ಮಂಡಳಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು. ಕಾಯ್ದೆ ಕಲಂ 22ರಲ್ಲಿ ನಮೂದಿಸಿದ ಘಟಕಗಳನ್ನು ಹೊರತುಪಡಿಸಿ ಬ್ಯಾಂಕಿನ ಯಾವುದೇ ಸದಸ್ಯನ ಷೇರು ಬ್ಯಾಂಕಿನ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ ಐದರಷ್ಟನ್ನು ಮೀರತಕ್ಕದ್ದಲ್ಲ. | ಕರ್ನಾಟಕ ಸಹಕಾರ ಕಾಯ್ದೆ ತಿದ್ದುಪಡಿ ಸೆಪ್ಟೆಂಬರ್ 2021 |
| 18 | **ಸದಸ್ಯನ ಕರ್ತವ್ಯಗಳು : ಬ್ಯಾಂಕಿನ ಯಾರೇ ಸದಸ್ಯನು –**<br>(i) ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ನೌಕರನಾಗಿರತಕ್ಕದ್ದಲ್ಲ; | **ಸದಸ್ಯನ ಕರ್ತವ್ಯಗಳು : ಬ್ಯಾಂಕಿನ ಯಾವುದೇ ಸದಸ್ಯನು –**<br>(i) ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ಅಥವಾ ಅದರ ಒಕ್ಕೂಟ ಅಥವಾ ಅದರ ಸಂಯುಕ್ತ ಸಂಘದ ನೌಕರನಾಗಿರತಕ್ಕದ್ದಲ್ಲ; | ಕರ್ನಾಟಕ ಸಹಕಾರ ಕಾಯ್ದೆ ತಿದ್ದುಪಡಿ ಸೆಪ್ಟೆಂಬರ್ 2021 |

## ಬೈಲಾ ತಿದ್ದುಪಡಿ

| ಬೈಲಾ ಸಂಖ್ಯೆ | ಹಾಲಿ ಬೈಲಾ | ತಿದ್ದುಪಡಿ ನಂತರದ ಬೈಲಾ | ತಿದ್ದುಪಡಿಗೆ ಕಾರಣಗಳು |
|---|---|---|---|
| **19** | **ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು**<br>3) ಬ್ಯಾಂಕಿನ ಸದಸ್ಯನು ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 3 ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ ಮೂರು ನಿರಂತರ ಸಹಕಾರ ವರ್ಷಗಳವರೆಗೆ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳಲು ತಪ್ಪಿದ್ದಲ್ಲಿ, ಅಂಥ ಸದಸ್ಯನು ಮೂರು ವರ್ಷಗಳ ಅವಧಿಗೆ ಸಾಮಾನ್ಯ ಸಭೆಯಲ್ಲಿ ಮತನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | **ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು**<br>3) ಬ್ಯಾಂಕಿನ ಒಬ್ಬ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗದಿದ್ದಲ್ಲಿ ಅಥವಾ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂಥ ಸದಸ್ಯನು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | ಕರ್ನಾಟಕ ಸಹಕಾರ ಕಾಯ್ದೆ ತಿದ್ದುಪಡಿ ಸೆಪ್ಟೆಂಬರ್ 2021 |
| **44** | **ಮತ ನೀಡಿಕೆ :**<br>(5) ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ;<br>(ಇ) ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಮೂರುವರ್ಷಗಳ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | **ಮತ ನೀಡಿಕೆ :**<br>(5) ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ;<br>(ಇ) ಯುಕ್ತವಾಗಿ ತಿಳಿಸಲಾದ ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಒಂದು ವರ್ಷಗಳವರೆಗೆ ಮತಚಲಾಯಿಸುವ ಹಕ್ಕು ಇರುವುದಿಲ್ಲ. | ಕರ್ನಾಟಕ ಸಹಕಾರ ಕಾಯ್ದೆ ತಿದ್ದುಪಡಿ ಸೆಪ್ಟೆಂಬರ್ 2021 |

| ಬೈಲಾ ಸಂಖ್ಯೆ | ಹಾಲಿ ಬೈಲಾ | ತಿದ್ದುಪಡಿ ನಂತರದ ಬೈಲಾ | ತಿದ್ದುಪಡಿಗೆ ಕಾರಣಗಳು |
|---|---|---|---|
| | (ಎಫ್) ಮೂರು ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿಗಳಲ್ಲಿ ಪ್ರತಿವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಮೂರು ವರ್ಷಗಳ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | (ಎಫ್) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಒಂದು ವರ್ಷದ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | ಕರ್ನಾಟಕ ಸಹಕಾರ ಕಾಯ್ದೆ ತಿದ್ದುಪಡಿ ಸೆಪ್ಟೆಂಬರ್ 2021 |
| **55** | **1) ಮಂಡಳಿಯ ತೆರವಾದ ಸ್ಥಾನಗಳು :** ಮಂಡಳಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. | **1) ಮಂಡಳಿಯ ತೆರವಾದ ಸ್ಥಾನಗಳು :**(1) ಮಂಡಳಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. ಪರಂತು ಮಂಡಳಿಯ ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು. | ಕರ್ನಾಟಕ ಸಹಕಾರ ಕಾಯ್ದೆ ತಿದ್ದುಪಡಿ ಸೆಪ್ಟೆಂಬರ್ 2021 |

**–: ವಿಶೇಷ ಮಾಹಿತಿ :–**

1. ಠೇವಣಿಗಳಿಗೆ ಬರುವ ಬಡ್ಡಿಗೆ ಮೂಲದಲ್ಲಿಯೇ ಆದಾಯ ತೆರಿಗೆಯಿಂದ ವಿನಾಯಿತಿ ಪಡೆಯಲು ಬಯಸುವ ಠೇವಣಿದಾರರು ಪ್ರತಿ ವರ್ಷ ಏಪ್ರಿಲ್ ತಿಂಗಳ 10ನೇ ತಾರೀಖಿನ ಒಳಗೆ ಮತ್ತು ಹೊಸದಾಗಿ ಠೇವಣಿ ಮಾಡಿದಲ್ಲಿ ಪ್ಯಾನ್ ಸಂಖ್ಯೆಯ ಜೊತೆಗೆ 15 G / 15H ಫಾರಂಗಳನ್ನು ಸಲ್ಲಿಸಲು ಕೋರಿದೆ.

2. ಕೇಂದ್ರೀಕೃತ ಕೆ.ವೈ.ಸಿ (ನಿಮ್ಮ ಗ್ರಾಹಕರನ್ನು ತಿಳಿ) (Centralized Know Your Customer) ಮಾಹಿತಿ ಸಂಗ್ರಹಕ್ಕೆ ಕೇಂದ್ರ ಸರ್ಕಾರ ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರೀಕೃತ ಕೆ.ವೈ.ಸಿ ನಿಯಮಾವಳಿ ರಚಿಸಿದ್ದು ಅದರನ್ವಯ ಗ್ರಾಹಕರ ಮಾಹಿತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕಾಗಿದ್ದು ಎಲ್ಲಾ ಗ್ರಾಹಕರು ಮತ್ತು ಸದಸ್ಯರು ತಮ್ಮ ಆಧಾರ್ ಕಾರ್ಡ್ / ಸರಕಾರದಿಂದ ಮಾನ್ಯತೆ ಪಡೆದ ಯಾವುದೇ ದಾಖಲಾತಿ ಮತ್ತು ಪ್ಯಾನ್ ಕಾರ್ಡ್‌ನ ಪ್ರತಿಗಳನ್ನು ಹಾಗೂ ಮೊಬೈಲ್ ಸಂಖ್ಯೆಗಳನ್ನು ಬ್ಯಾಂಕಿನಲ್ಲಿರುವ ತಮ್ಮ ಖಾತೆಗಳಿಗೆ ಕಡ್ಡಾಯವಾಗಿ ಒದಗಿಸತಕ್ಕದ್ದು.

---

**ತೆರೆದ – ಅಂಚೆ**

**ಶ್ರೀಮತಿ/ಶ್ರೀ**

**ವಿಳಾಸದಾರರಿಗೆ ತಲುಪದಿದ್ದಲ್ಲಿ ಕೆಳಕಂಡ ವಿಳಾಸಕ್ಕೆ ಹಿಂತಿರುಗಿಸಿ :**

**ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತ**

ನಂ. 1380/ಬಿ, 6ನೇ ಅಡ್ಡರಸ್ತೆ, ಅಶೋಕನಗರ,
ಬನಶಂಕರಿ 1ನೇ ಹಂತ 2ನೇ ಘಟ್ಟ, ಬೆಂಗಳೂರು – 560 050